ಕಲೀಬೇಕ್ರಯ್ಯ' ಅಂತ ಓಂಪ್ರಕಾಶ್ ತಮ್ಮ ಶಿಫ್ಟ್‌ನಲ್ಲಿದ್ದವರ ಕಡೆಗೆ ನೋಡುತ್ತ ಮೆಚ್ಚುಗೆಯಿಂದ ಹೇಳಿದರು.

'ಸಾರ್, ತೇಜಸ್ವಿ ನನ್ನ ಅಮ್ಮನ ಕಡೆಯಿಂದ ಸಂಬಂಧಿ. ನಾವಿಬ್ಬರೂ ಒಂದೇ ಯೂನಿವರ್ಸಿಟಿಯಲ್ಲಿ ಓದಿದೋರು. ನಮ್ಮ ನಡುವೆ ಸ್ನೇಹಕ್ಕಿಂತ ಸಂಬಂಧವೇ ಹೆಚ್ಚಾಗಿದೆ. ಮೊದಲಿಂದಲೂ ಅವನನ್ನು ಭಾವ ಅಂತಲೇ ಕರೆಯೋದು' ಅಂತ ವಿವರಣೆ ಕೊಟ್ಟ. ಓಂ ಪ್ರಕಾಶ್ 'ತಪ್ಪೇನಿಲ್ಲ' ಅಂದರು.

★★★

ಮೂರು ದಿನ ಅಜಯ್, ತೇಜಸ್ವಿ ಇಬ್ಬರೂ ಆಫೀಸಿಗೆ ಬರಲಿಲ್ಲ. ಆಫೀಸಿಗೆ ತಿಳಿಸದೆ ರಜಾ ಹಾಕಿದ್ದರು. ಕಾರಣ ಗೊತ್ತಾಗಲಿಲ್ಲ. ಅವನಿದ್ದರೆ ಹೊತ್ತು ಹೋಗೋದೇ ಗೊತ್ತಾಗಲ್ಲ ಅಂತ ಕೆಲವರು ಪೇಚಾಡಿಕೊಂಡರು. ಎಲ್ಲಿ ತೇಜಸ್ವಿ? ರಜಾ ಹಾಕಿದ್ದಾನಾ ಅಂತ ಸುಪ್ರಿಯಾ ಎರಡು ಸಲ ಜನರಲ್ ಡೆಸ್ಕ್ ಬಳಿಗೆ ಬಂದು ಕೇಳಿಹೋದಳು. ಕಾರಣ ಯಾರಿಗೂ ಗೊತ್ತಿರಲಿಲ್ಲ.

ಮೂರು ದಿನಗಳಿಂದ ಲೀಡ್ ಬರೆಯೋ ಕೆಲಸ ನನ್ನ ಮೇಲೇ ಬಿತ್ತು ಅಂತ ಸೀನಿಯರ್ ಸಬ್ ಚಂದ್ರಪ್ರಭಾಗೆ ಅಸಮಾಧಾನ. ತೇಜಸ್ವಿ ಇದ್ದರೆ ಎಲ್ಲ ಕೆಲಸಗಳೂ ಸಲೀಸು. ಬ್ಯೂರೋಗಳಿಂದ ಬರುವ ಕಾಪಿಗಳನ್ನು ಅವನೇ ನೋಡುತ್ತಿದ್ದ. ಫ್ರಂಟ್ ಪೇಜ್ ಆದ ಮೇಲೆ ಡೇಟು, ರೇಟು (ಪತ್ರಿಕೆ ಬೆಲೆ), ಸಂಪುಟ, ಸಂಚಿಕೆ, ಫೋಟೊ ಕ್ಯಾಪ್ಷನ್, ಜಾಯಿನ್ ಇತ್ಯಾದಿಗಳನ್ನೆಲ್ಲ ಅವನೇ ನೋಡಿಕೊಳ್ಳುತ್ತಿದ್ದ. ಜತೆಗೆ ಬಾಂಬೆ ಗೋಲ್ಡ್ ರೇಟು, ವೆದರ್ ಬುಲೆಟಿನ್, ವಾಟರ್ ಲೆವೆಲ್ ಇತ್ಯಾದಿಗಳು ಬಂದವೇ ಎಂಬುದನ್ನು ಅವನೇ ಚೆಕ್ ಮಾಡುತ್ತಿದ್ದ. ಈಗ ಹೇಳದೆ ಕೇಳದೆ ರಜಾ ಹಾಕಿದ್ದರಿಂದ ಎಲ್ಲ ಕೆಲಸ ನನ್ನ ಮೇಲೇ ಬಿತ್ತು ಅಂತ ಚಂದ್ರಪ್ರಭಾ ಮನಸ್ಸಿಗೆ ಕಿರಿಕಿರಿ ಮಾಡಿಕೊಂಡಿದ್ದರು.

ನಾಲ್ಕನೇ ದಿನ ಇಬ್ಬರೂ ಆಫೀಸಿಗೆ ಬಂದರು. ನಮ್ಮ ಬಂಧುವೊಬ್ಬರು ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ಸರ್ಜರಿ ಆಯ್ತು. ಅವರ ಜತೆ ನಾವು ಇರಬೇಕಿತ್ತು. ಅದರಿಂದಾಗಿ ಬರಲಿಲ್ಲ ಅಂತ ನ್ಯೂಸ್ ಎಡಿಟರ್ ಹತ್ತಿರ ಹೋಗಿ ವಿವರಣೆ ಕೊಟ್ಟು ಕ್ಷಮೆ ಕೇಳಿದರು. ಇನ್ನು ಮುಂದೆ ಹೇಳದೆ, ಕೇಳದೆ ರಜಾ ಹಾಕಲ್ಲ ಅಂದರು. ಆಮೇಲೆ ರಜೆ ಅರ್ಜಿ ಬರೆದುಕೊಟ್ಟರು. ಇಡೀ ದಿನ ಇಬ್ಬರೂ ಡಲ್ ಆಗಿದ್ದರು. ಒಂದು ವಾರ ಕಳೆಯುತ್ತಿದ್ದಂತೆ ಇಬ್ಬರೂ ಹಳೆಯ ಜಾಡಿಗೆ ಮರಳಿದರು.

ರೀಟ್ಟೈನ್ ಪೇಜ್ ನೋಡು. ಡಮ್ಮಿ ಇನ್ನೂ ಬಂದಿಲ್ಲ. ಆ್ಯಡ್ ಸೆಕ್ಷನ್‌ಗೆ ಫೋನ್ ಮಾಡು. ಪೇಜ್ ಒನ್‌ನಲ್ಲಿ ಇವತ್ತು ಆ್ಯಡ್ ಜಾಸ್ತಿ ಇದೆ ಅಂತ ಗರುಡಾಚಾರ್ ಫೋನ್ ಮಾಡಿದ್ರು... ಇನ್ನೂ ಡಮ್ಮಿ ಬಂದಿಲ್ಲ. ಜಾಸ್ತಿ ಸುದ್ದಿ ಬರೆಸೋದು ಬೇಡ ಅಂತ ಹೇಳುತ್ತ ರಿಲ್ಯಾಕ್ಸ್ ಮೂಡ್‌ನಲ್ಲೇ ಇರುತ್ತಿದ್ದ ಓಂಪ್ರಕಾಶ್ ಆವತ್ತು ಬೇಸರದಲ್ಲಿದ್ದರು. ಕಾರಣವೇನು ಅಂತ ಯಾರೂ ಕೇಳಲಿಲ್ಲ.

'ನನ್ನ ವೈಫ್‌ಗೆ ಹುಷಾರಿಲ್ರಿ. ಅಮ್ಮನಿಗೆ ಕಣ್ಣು ಕಾಣಲ್ಲ. ಮಕ್ಕಳು ಸಣ್ಣವರು. ಸಾಕಾಗಿದೆ ನಂಗೆ. ಆಫೀಸು ಮನೆ ಎಲ್ಲ ಜವಾಬ್ದಾರಿ ನನ್ನ ಮೇಲೆ ಬಿದ್ದಿದೆ...' ಅಂತ ಯಾರೂ ಕೇಳದಿದ್ದರೂ ಹೇಳಿ ಬೇಸರ ಮಾಡಿಕೊಂಡರು.

'ರೀ ಚಂದ್ರಪ್ರಭಾ, ಇವತ್ತು ನಾನು ಬೇಗ ಮನೆಗೆ ಹೋಗ್ತೀನಿ. ತೇಜಸ್ವಿ ಇದ್ದಾನೆ. ನೀವಿಬ್ಬರೂ ಹೇಗೋ ಮ್ಯಾನೇಜ್ ಮಾಡಿ' ಅಂತ ಅವರು ಹೇಳಿದ್ದನ್ನು ಕೇಳಿ ಎಲ್ಲರಿಗೂ ಗಾಬರಿ. 'ಸರ್, ನೀವು ರಜಾ ಹಾಕಿ ಹೋಗಿ... ನಾವು ಮ್ಯಾನೇಜ್ ಮಾಡ್ತೀವಿ' ಅಂತ ಎಲ್ಲರೂ ಹೇಳಿದರು. ಆಮೇಲೆ ಅರ್ಧ ಗಂಟೆ ಕೂತಿದ್ದ ಓಂಪ್ರಕಾಶ್ ಅಟೆಂಡೆನ್ಸ್‌ನಲ್ಲಿ ಸೈನ್ ಮಾಡಿ ಮನೆಗೆ ಹೋದರು. ಅವರು ಹೋದದ್ದು ಯಾರ ಗಮನಕ್ಕೂ ಬರಲಿಲ್ಲ.

ಸಂಜೆ ಮೀಟಿಂಗ್ ಶುರುವಾಗೋಕೆ ಮೊದಲು, 'ಎಲ್ರಿ ಓಂಪ್ರಕಾಶ್' ಅನ್ನುತ್ತ ನ್ಯೂಸ್ ಎಡಿಟರ್ ಡೆಸ್ಕ್ ಹತ್ತಿರ ಬಂದರು. 'ಸಾರ್, ಪ್ರಕಾಶ್ ಸರ್ ವೈಫ್‌ಗೆ ಹುಷಾರಿಲ್ಲವಂತೆ. ಅವರ ಮನೆಯಿಂದ